# ಸ್ವಾತಂತ್ರ್ಯ ಸಂಗ್ರಾಮದ ಲಾವಣಿಗಳು

## ಲಾವಣಿಗಳ ಸಂಗ್ರಹ



ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

ಬಿ. ನೀಲಕಂಠಯ್ಯ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೨೬

# ಸ್ವಾತಂತ್ರ್ಯ ಸಂಗ್ರಾಮದ ಲಾವಣಿಗಳು


ಲಾವಣಿಕಾರ :

**ಬಿ. ನೀಲಕಂಠಯ್ಯ**

ತುರಾ ಬಿರುದಾರ್, ಲಾವಣಿ ವಿದ್ವಾನ್

ಬೆಂಗಳೂರು



**ಕರ್ನಾಟಕ ಜಾನಪದ ಪರಿಷತ್ತು**

**ನಂ.1, ಜಲದರ್ಶಿನಿ ಬಡಾವಣೆ,**

**ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,**

**ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054**

**SWATHANTHRYA SANGRAMADA LAVANIGALU -**
Ballads on Freedom Struggle - by **B. Neelakantaiah.**
Published by : KARNATAKA JANAPADA PARISHATH.
No.1, Jaladarshini Layout, Near M.S. Ramaiah Hospital Gate,
New B.E.L. Road, Bangalore - 560 054.
Pages : 32 Price : Rs.10 2008.

ಪ್ರಥಮ ಮುದ್ರಣ : ೨೦೦೮

ಪ್ರತಿಗಳು : ೨೦೦೦

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿ)

**ಹಕ್ಕುಗಳನ್ನು ಕಾಯ್ದಿರಿಸಿದೆ**

ಗ್ರಂಥ ಪ್ರಕಟಣ ಸಲಹಾ ಸಮಿತಿ

| | |
|---|---|
| ನಾಡೋಜ ಡಾ. ಜಿ. ನಾರಾಯಣ | ಅಧ್ಯಕ್ಷರು |
| ಶ್ರೀ ಟಿ. ತಿಮ್ಮೇಗೌಡ | ಸದಸ್ಯರು |
| ಶ್ರೀಮತಿ ಇಂದಿರಾ ಬಾಲಕೃಷ್ಣ | ಸದಸ್ಯರು |
| ಶ್ರೀ ಗೊ.ರು. ಚನ್ನಬಸಪ್ಪ | ಸದಸ್ಯರು |
| ನಾಡೋಜ ಡಾ. ಸಿದ್ಧಲಿಂಗಯ್ಯ | ಸದಸ್ಯರು |
| ಡಾ. ಎಂ.ಎ. ಜಯಚಂದ್ರ | ಸದಸ್ಯರು |
| ಪ್ರೊ. ಡಿ. ಲಿಂಗಯ್ಯ | ಸಂಪಾದಕರು |
| ಡಾ. ಚಕ್ಕೆರೆ ಶಿವಶಂಕರ್ | ಕಾರ್ಯದರ್ಶಿ-ಸಂಚಾಲಕರು |

ಮುದ್ರಕರು

ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು-ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಪ್ರಸಿದ್ಧ ಲಾವಣಿಕಾರ **ಬಿ. ನೀಲಕಂಠಯ್ಯ** ನವರ ಲಾವಣಿಗಳಿಂದ ಆಯ್ದು **ಸ್ವಾತಂತ್ರ್ಯ ಸಂಗ್ರಾಮದ ಲಾವಣಿಗಳು** ಎಂಬ ಗ್ರಂಥವನ್ನು ಸಿದ್ಧಪಡಿಸಿದೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೧೫-೦೭-೨೦೦೮

**ಜಿ. ನಾರಾಯಣ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

# ಸ್ವಾತಂತ್ರ್ಯ ಸಂಗ್ರಾಮದ ಲಾವಣಿಗಳು

## ೧. ಹೈದರ್ ಮತ್ತು ಟಿಪ್ಪುಸುಲ್ತಾನ್ ಲಾವಣಿ

### ಧಾಟಿ – ಖಡೀಚಾಲ್

ಭೇಷಕ್ ತಮಾಷಾ ಟೈಗರ್ ನಿಶಾನಾ ಟೀಪುಸುಲ್ತಾನನ ಬಿರುದಾಯ್ತು
ಮಸಲತ್ ಮಾಡಿದ ಮೀರ್ಸಾದಕನಿಗೆ ದೇಶದ್ರೋಹಿ ಎಂಬೆಸರಾಯ್ತು ॥ಪಲ್ಲವಿ॥

೧

ಹೈದರ್ ಜನನವು ಸಾವಿರದೇಳ್ನೂರ್ ಇಪ್ಪತ್ತೆರಡನೆ ಇಸವಿಯೊಳು
ಹೈದರ್ ತಂದೆಯು ಫತ್ತೆ ಮಹಮದ್ ತಾಯಿಯು ಮಜೀದ ಬೇಗಮಳು ॥
ಹೈದರ್ ಅಗ್ರಜನಿದ್ದನು ಷಾಬಾಜ್ ಮೈಸೂರ್ ದಳವಾಯ್ ಸೈನ್ಯದೊಳು
ಹೈದರ್ ವಂಶವು ಪ್ರಸಿದ್ಧ ಸುನ್ನೀಪಂಗಡವೆನಿಸಿದೆ ಚರಿತೆಯೊಳು ॥
ಹೈದರ್ ಅಣ್ಣನು ಅಳಿದ ಅನಂತರ ದೇವನಹಳ್ಳಿಯ ಕದನದೊಳು
ಹೈದರ್ ಕೀರ್ತಿ ಪ್ರತಾಪವು ಹೆಚ್ಚಿತು ತಿರುಚನಪಳ್ಳಿಯ ವ್ಯಾಜ್ಯದೊಳು ॥
ಹೈದರ್ ಸಾಹಸ ಬಿದನೂರ್ ಸಂತರ ಅದ್ಭುತ ಆರಣಿಯುದ್ಧದೊಳು
ಹೈದರ್ ಮರಣವು ಸಾವಿರದೇಳ್ನೂರ್ ಎಂಬತ್ತೆರಡರ ಅಂತ್ಯದೊಳು ॥

ದೊಡ್ಡ ಉಡನ್

ಹೈದರ್ ಕಾಲದಿ ಮೈಸೂರ್ ದೇಶವು ಮೊದಲಿಗಿಂತ ಮುಂದರಿದಿತ್ತು

ಹೈದರ್ ಆಲಿಗೆ ಖಾನ್‌ಬಹದ್ದೂರ್ ನವಾಬನೆಂಬುವ ಬಿರುದಿತ್ತು ॥
ಹೈದರ್ ಕೈಕೆಳಗಿಪ್ಪತ್ತಾರು ಜನ ಪಾಳೇಗಾರರ ಫೌಜಿತ್ತು
ಹೈದರ್ ಚಂಡಪ್ರತಾಪದ ಕಾಲದಿ ಲಂಡನ್ ಲೊಡಬಡಕಿರುತಿತ್ತು ॥

ಚಿಕ್ಕ ಉಡಸ್

ಇಷ್ಟಲ್ಲದೆ ಹಿಂದೂಸ್ತಾನವೆಲ್ಲ ಬೆದರಿತ್ತು
ಎಷ್ಟೇಳಲು ತೀರದು ಹೈದರಾಲಿ ದೌಲತ್ತು ।
ಶ್ರೇಷ್ಠತ್ವ ವಜ್ರ ವೈಢೂರ್ಯ ಇವಗೆ ಸಿಕ್ಕಿತ್ತು
ಅಷ್ಟೈಶ್ವರಿಯಿಂದಲಿ ಮೆರೆಯುತ್ತಿತ್ತು ಸಂಪತ್ತು !!

ಗುಲ್ಲು ಉಡಸ್

ಸತ್ವಗುಣ ಹೈದರನೊಳಗಿತ್ತು
ಮಿತ್ರರೊಳು ನಂಬಿಕೆ ಬಹಳಿತ್ತು ।
ಸತ್ಯ ಪೂರ್ಣಯ್ಯನ ಪೊಂದಿತ್ತೂ
ಉತ್ತಮ ವೀರರ ನಿತ್ಯಪ್ರತಾಪದಿ ಸತ್ವವು ಬೆರದಿತ್ತು ॥

ಶ್ಲೋಕ

ಜಾತಿ ಮುಸಲಿಂ ಹೈದರಾಲಿಗೆ ಪ್ರೀತಿಯಿದ್ದಿತು ಜನರಲಿ
ಜಾತಿ ಭೇದವ ಬಿಟ್ಟು ಹೈದರ್ ಖ್ಯಾತಿಪೊಂದಿದನಿಳೆಯಲಿ ॥

ಚಾಲು

ಮೈಸೂರ್ ಹೈದರ್ ಆಲಿಯ ಕೀರ್ತಿಯು ದೇಶವಿದೇಶದಿ ಮೆರೆದೋಯ್ತು
ಮಸಲತ್ಮಾಡಿದ ಮೀರ್ಸಾದಕನಿಗೆ ದೇಶದ್ರೋಹಿ ಎಂಬೆಸರಾಯ್ತು ॥

೨

ಉತ್ತಮ ಹೈದರ್ ಚಿತ್ತದೊಳದ್ಭುತ ಶತ್ರುವ ಜಯಿಸುವ ಬಯಕಿತ್ತು
ಸುತ್ತಣ ದೇಶವು ಕೈವಶವಾದರು ಚಿತ್ರದುರ್ಗ ಕೈಮಿಂಚಿತ್ತು ॥
ಎತ್ತಿದ ಹೈದರ್ ಚಿತ್ರದುರ್ಗದ್ಮೇಲ್ ಮೊತ್ತ ಲಕ್ಷ ಪೌಜ್ಹೊರಟಿತ್ತು
ಹೊತ್ತನು ಕಳೆಯದೆ ಚಿತ್ರದುರ್ಗವನು ಮುತ್ತಿದನಾಕ್ಷಣ ಸುತ್ತಮುತ್ತ ॥
ಇತ್ತ ಕೇಳಿ ಏಳ್‌ಸುತ್ತಿನ ಕೋಟೆಯ ಚಿತ್ರದುರ್ಗ ಭಲ್ಕಡಿದಿತ್ತು
ಮುತ್ತಿ ದುರ್ಗ ಬೇಸತ್ತನು ಹೈದರ್ ಹತ್ತಾರು ಮಾಸಗಳಾಗಿತ್ತು ॥
ಬಿತ್ತರ ಬಿರ್ಕಟ್ ನಾಯ್ಕರ ಸೈನ್ಯವು ಚಿತ್ರದುರ್ಗದೊಳಗಡಗಿತ್ತು
ಕತ್ತಿ ಕಠಾರಿ ಫಿರಂಗಿ ಬಂದೂಕ್ ಐವತ್ತು ಸಾವಿರ ದಂಡಿತ್ತು ॥

ದೊಡ್ಡ ಉಡನ್

ಗಂಡನು ಬಿಸಿಲೊಳು ಉಂಡು ಮಲಗಿರಲು ಹೆಂಡತಿ ಓಬವ್ವೆ ಎಂಬುವಳು
ಗಂಡನ ಬದಲಾಗೆಂಡತಿ ವನಕೆಯ ಕಿಂಡಿಯೊಳಿದ್ದಳು ಪಹರೆಯೊಳು।
ಗಂಡು ಬಹದ್ದೂರ್ ದಂಡಿನ ಯೋಧರ ತಂಡವು ನುಗ್ಗಲು ಕಿಂಡಿಯೊಳು
ಕಂಡ ಕ್ಷಣವೆ ಖತಿಗೊಂಡು ಜಜ್ಜಿದಳು ರುಂಡಗಳಗಣಿತ ವನಿಕೆಯೊಳು ॥

ಚಿಕ್ಕ ಉಡನ್

ರಂಗಯ್ಯನ ಕೋಟೆಯ ಬಾಗಿಲು ಬಲವಾಗಿತ್ತು
ಬಂಗಾರದ ಗಟ್ಟಿಯೆ ಸಂತೆ ಬಾಗಿಲೆನಿಸಿತ್ತು ।
ಶೃಂಗಾರದಿ ನಾಲ್ಕಾರ್ ಕೋಟೆಬಾಗಲಿರುತಿತ್ತು
ಜಂಗಾಯಿತು ಒನಿಕೆಯ ಬಾಗಿಲೊಳಗೆ ಗಮ್ಮತ್ತು ।

## ಗುಲ್ ಉಡನ್

ದುರ್ಗದಾ ಮದಕರಿನಾಯ್ಕನಿಗೆ
ಭಾರ್ಗವನ ಕರುಣವು ಕುಂದೋಗೆ ।
ದುರ್ಗಿ ಉಚ್ಚಂಗಿಯ ಕೃಪೆ ತೊಲಗೇ
ನುಗ್ಗಿತು ಹೈದರ್ ಆಲಿಯ ಸೈನ್ಯವು ಚಿತ್ರದುರ್ಗದೊಳಗೆ ॥

### ಶ್ಲೋಕ

ಏಕನಾಥೇಶ್ವರಿಯ ಕೃಪೆಯದು ತೀರಿ ಮದಕರಿನಾಯ್ಕನು
ಲೋಕಮಧ್ಯದಿ ತೋರಿ ವಿಕ್ರಮ ತೀರಿಕೊಂಡನಿರಾಜನು ॥

### ಚಾಲು

ವಿಶೇಷ ತಂತ್ರದ ಕುಶಲತೆಯಿಂದಲಿ ಹೈದರ್ ಆಲಿಗೆ ಜಯವಾಯ್ತು
ಮಸಲತ್ಮಾಡಿದ ಮೀರ್ಸಾದಕನಿಗೆ ದೇಶದ್ರೋಹಿ ಎಂಬೆಸರಾಯ್ತು ॥

೩

ಭೀಕರ ಶತ್ರು ಭಯಂಕರನೆಂಬುತ ಲೋಕದಿ ಹೈದರ್ ಪೆಸರಿತ್ತು
ಲೋಕದೊಳತಿ ಸುಖ್ಯಾತಿಯ ಪಡೆದನು ಶ್ರೀಕಂಠನ ದಯ ಇವಗಿತ್ತು ॥
ಹಾಕಿದ ಹೈದರ್ ಆರಣಿ ಮುತ್ತಿಗೆ ಏಕದಿ ಕದನವು ನಡೆದಿತ್ತು
ತಾಕಿತು ಮೃತ್ಯುವು ಹೈದರ್ ಆಲಿಗೆ ಭೀಕರ ಜೆನ್‌ಫಣಿ ಎದ್ದಿತ್ತು ॥
ಈ ಕಡೆ ತಾಂತ್ರಿಕ ದಿವಾನ್ ಪೂರ್ಣಯ್ಯನ ಚಮತ್ಕಾರ ಬಲು ಚುರುಕಿತ್ತು
ಲೋಕಶಿಖಾಮಣಿ ಹೈದರ್ ಆಲಿಗೆ ಅಕಾಲಮರಣವೆ ಒದಗಿತ್ತು ॥
ಶ್ರೀಕರಪಟ್ಟದ ಮುಖ್ಯಸ್ಥರಿಗೀ ದುಃಖದ ವಾರ್ತೆಯು ಮುಟ್ಟಿತ್ತು
ವ್ಯಾಕುಲವೆಂಬುವ ಶೋಕಸಾಗರದಿ ಮೈಸೂರ್ ದೇಶವೆ ಮುಳುಗಿತ್ತು ॥

### ದೊಡ್ಡ ಉಡನ್

ಹೈದರ್ ಆಲಿಯು ಬಲ್ಲವನಲ್ಲವು ಓದುಬರಹವೆಂತೆಂಬುದನು
ಆದರು ಖಚಿತದಿ ಐದುಭಾಷೆಯೊಳು ಮಾತನಾಡ್ತುವದನು ಕಲಿತಿದ್ದನು ।
ಮೋದದಿ ವೈರಿಗಳೆಲ್ಲರ ಮರ್ಧಿಸಿ ಮೈಸೂರ್ ಧ್ವಜ ಮೆರೆಸಿದ್ದವನು
ಈ ಧರೆಯಿಂದಲಿ ಕಣ್ಮರೆಯಾದನು ಕನ್ನಡ ಕಡುಗಲಿ ಎನಿಸಿದನು ॥

### ಚಿಕ್ಕ ಉಡನ್

ಅಪ್ಪ ಕಟ್ಟಿದ ಮೈಸೂರ್ ದೇಶ ದೊಡ್ಡದಿತ್ತಲ್ಲ
ಟೀಪುವಿನ ಕಾಲದೊಳು ಇನ್ನು ವಿಸ್ತರಿಸಿತಲ್ಲ ।
ಕಪ್ಪವನೆ ತಂದಿದ್ದನು ಚಪ್ಪನ್ನಾರು ಬಿಡಲಿಲ್ಲ
ಬೆಪ್ಪಾದರು ಅರಿಗಳು ಕೇಳಿ ಟೀಪು ಜಯಸೊಲ್ಲ ॥

### ಗುಲ್ಲು ಉಡನ್

ಹೈದರನ ಬಳಿಕ ಟೀಪುಸುಲ್ತಾನ್
ಬೆದರಿಸಿದ ಗದಗದ ಹಿಂದುಸ್ಥಾನ್
ಪದವಿ ಮಾಮೈಸೂರಿನ ಸುಲ್ತಾನ್
ಕದನದಿ ಮಂಗ್ಳೂರ್ ಹಿಡಿದನು ಕೈವಶ ಬೆದರಿದ್ದಿತು ಲಂಡನ್ ॥

### ಶ್ಲೋಕ

ಅರವು ಆಂಧ್ರಾ ಷುರುವಿಗಿಡಿದನು ಷಾರು ಕೊಯಮತ್ತೂರನು
ನಿರುತ ಲೂಟಿಯ ಹೊಡೆಯುತ್ತಿದ್ದನು ನೀಲಗಿರಿ ಮಲಬಾರನು ॥

### ಚಾಲು

ಮೈಸೂರ್ ಷರ್ಜಾ ಗರ್ಜನೆ ಕೇಳಿ ಲಂಡನ್ ಪಶುಗಳು ಬೆದರೋಯ್ತು

ಮಸಲತ್ಮಾಡಿದ ಮೀರ್ಸಾದಕನಿಗೆ ದೇಶದ್ರೋಹಿ ಎಂಬೆಸರಾಯ್ತು ॥

೪

ಆಟಾಟೋಪದಿ ಟೀಪುಸುಲ್ತಾನನು ಆರ್ಕಾಟ್ ಲೂಟಿಯ ಮಾಡಿದ್ದನು
ಏಟೇಟಿನಮೇಲ್ ಉಲ್ಟಾಫರಂಗಿಯ ಕೋಟಿಗಳೆಷ್ಟೋ ಲೂಟಿದ್ದನು ॥
ನಟನೆಯ ನೈಜಾಂ ಮರಾಟಿರಾಜರ ಪಟಾಲಮ್ಮ ದಿಟ ಗೆದ್ದಿದ್ದನು
ಬ್ರಿಟಿಷ್ ಜನಾಂಗದ ಈಸ್ಟಿಂಡ್ಯ ಕಂಪೆನಿ ಲಾಸ್ಟಾಗುವಂದದಿ ಮಾಡಿದ್ದನು ।
ಕೋಟಲೆ ಹತ್ತಿದ ಬ್ರಿಟಿಷ್ ವರ್ತಕರು ಕೂಟದಿ ಗೈದರು ಮಸ್ಲತ್ತನು
ಲೂಟಿಯನೊಡೆಯಲು ಶ್ರೀರಂಗಪಟ್ಣಕೆ ವಾಲ್ಟರ್ ಹ್ಯಾರಿಸ್ ಬಂದಿದ್ದನು ॥
ಮಿಟಮಿಟಕಣ್ ಬಿಡುತಿದ್ದ ಮರಾಟಿಯು ಸಪೋರ್ಟಾಗಿ ಸೈನ್ಯ ತಂದಿದ್ದನು
ಕಟಕಟ ಹಲ್ ಕಡಿಯುತ್ತ ನಿಜಾಮನು ಥಟಕ್ಕನೇ ಒಳಹೊಕ್ಕಿದ್ದನು ॥

ದೊಡ್ಡ ಉಡನ್

ಮೀರ್ ಕಮರುದ್ದೀನ್ ಖಾನ್ ಸೇನಾಪತಿ ಸೋತನು ಓರೋಡೆ ಬಳಿಯಲ್ಲಿ
ಬಾರೋದ್ದೀನನ ಬಲವೆಲ್ಲ ಮಡಿದಿತು ಗುಲ್‌ಷನಬಾದಿನ ಯುದ್ಧದಲಿ ।
ಫಿರಂಗಿ ದಳಪತಿ ಮಾನ್ಷಿಯರ್ ಲಾಲಿಯು ಮೂರ್ಛೆಯಬಿದ್ದನು ರಣದಲ್ಲಿ
ಮೀರಸಾದಕನ ದ್ರೋಹದಿ ಸತ್ತನು ಸೈಯ್ಯದ್ ಗಫೂರ್ ಗುಂಡೇಟಿನಲಿ ॥

ಚಿಕ್ಕ ಉಡನ್

ಫಡ್‌ಫಡಲ್‌ಫಡಲ್ ಗುಂಡೊಡೆದರಣ್ಣ ಕೋಟೇಗೆ
ಗಡಬಿಡಿಯು ಹತ್ತಿದ್ದಿತು ಶ್ರೀರಂಗಪಟ್ಟಣದೊಳಗೆ ।
ಕಡುದ್ರೋಹಿಗಳಾಟದಿ ಮದ್ದಿನ ಮನೆ ಉರಿದ್ಹೋಗೆ
ಇಡಿಸಿದ್ದ ಫಿರಂಗಿಯು ಮುರಿದುಬಿತ್ತು ಬುರುಜೊಳಗೆ ॥

ಗುಲ್ ಉಡನ್

ವಂಚಕರ ಮಿಂಚಿನಾಟ ಬಳ್ಳಿ
ಸಂಚರಿಸಿ ಗೊಂಚಲಾಗಿತ್ತಿಲ್ಲಿ ।
ಕೊಂಚ ದಂಡಿತ್ತು ಕೋಟೆಯಲ್ಲಿ
ವಂಚನೆಮಾಡಿತು ಫ್ರೆಂಚರ ಸೈನ್ಯವು ಕೊಂಚಕಾಲದಲ್ಲಿ ॥

ಶ್ಲೋಕ

ಮೀರಸಾದಕನಾಟ ಮೀರಿದ ನಾಟಕವೆ ಆಗಿದ್ದಿತು
ದಾರಿತೋರಲು ವೈರಿಜನರಿಗೆ ಭಾರಿ ಕಷ್ಟವೆ ತಪ್ಪಿತು ।

ಚಾಲು

ಖಾಸಾ ದಂಡಿನ ಶ್ರೇಷ್ಠ ಮುಖಂಡರ ಮೋಸವು ಸುಲ್ತಾನ್ಗರಿವಾಯ್ತು
ಮಸಲತ್ಮಾಡಿದ ಮೀರ್ಸಾಕನಿಗೆ ದೇಶದ್ರೋಹಿ ಎಂಬೆಸರಾಯ್ತು ॥

ಔ

ಹರಾಮಖೋರರ ಖರಾಮತ್ತರಿತನು ಟೀಪುಸುಲ್ತಾನನು ನಿಮಿಷದಲಿ
ಅರೇ ಹಮಾರೇ ನಮ್ಮಖ್ವಿರಾಮ ಕರೇಸೊ ಕಾಮೆಂದ ಮಹಲಿನಲಿ ॥
ಸ್ವರಾಜ್ಯ ರಕ್ಷಣೆ ಸ್ವತಂತ್ರಕೋಸುಗ ರಣಾಗ್ರಕ್ಹೊರಟನು ರೋಷದಲಿ
ಫರಂಗಿ ಸೋಲ್ಜರ್ ತರಂಗಮಧ್ಯದಿ ತುರಂಗ ಬಿಟ್ಟನು ತೂರ್ಯದಲಿ ॥
ಪರಂಪರೆಯ ಪರ ವಿರೋಧಿ ಫೌಜನು ಕುರೀಗಳಂದದಿ ಖಡ್ಗದಲಿ
ಸರಾಸರೀ ಇಲ್ ಬರಿಯಲು ಸಾಗದು ತರಿದನು ಎಷ್ಟೋ ಶಿರ ಬದಲಿ ॥
ಪರಾಕ್ರಮದಿ ಬಲು ಹೋರಾಡಿ ಬಿದ್ದನು ರಂಗರಬಾಗಿಲ ಗವಿಯಬಳಿ
ಫರಂಗಿಫೌಜಿನ ತರಂಗ ನುಗ್ಗಿತು ಶ್ರೀರಂಗಧಾಮನ ಪಟ್ಣದಲಿ ॥

ದೊಡ್ಡ ಉಡನ್

ವೈರಿ ಮಧ್ಯೆ ಹೋರಾಡಿ ಸ್ವರ್ಗವನು ಸೇರಿದ ಸುಲ್ತಾನ್ ಸಂದೇಶ
ನೂರು ವರುಷ ಇಲಿಯಾಗಿ ಬಾಳುವುದು ಸಾಕು ಹುಲಿಯಬಾಳ್ಗೊಂದಿವಸ ॥
ಸಾರುತಲಿದ್ದನು ಸುಲ್ತಾನನೀಪರಿ ಸರ್ವರೆದುರು ತನ್ನುದ್ದೇಶ
ಧೀರನ ಮೈಸೂರ್ ಹುಲಿ ಎಂತೆಂಬುವ ಬಿರುದೊಂದುಳಿದಿದೆ ಈ ದಿವಸ ॥

ಚಿಕ್ಕ ಉಡನ್

ಹುಲಿ ಸೀಳಿದ ದೊರೆ ಅಳಿದ್ಹೋದಮೇಲೆ ರಣದಲ್ಲಿ
ಗಲಭೆಯು ಎದ್ದಿದ್ದಿತು ಶ್ರೀರಂಗಪಟ್ಟಣದಲ್ಲಿ
ಸುಲಿಗೆಯನೆ ಮಾಡಿದರು ಶತ್ರು ಜನರು ಭರದಲ್ಲಿ
ಬಳಿಕಾದ ವಿವರ ಬರದೇನು ಇಲ್ಲ ಫಲವಿಲ್ಲಿ.

ಗುಲ್ಲು ಉಡನ್

ಬಂದಿದ್ದವರೆಲ್ಲ ತಿಂದು ತೇಗೆ
ಹಿಂದಿನಾ ರಾಜರ ಸಂತತಿಗೆ
ಮುಂದಿನೊಳು ಮುಮ್ಮಡಿ ಕೃಷ್ಣರಿಗೆ
ಪೊಂದಿತು ರಾಜ್ಯವು ಸಾವಿರದೇಳ್ನೂರ್ ತೊಂಬತೊಂತ್ರೊಳಗೆ ॥

ಶ್ಲೋಕ

ರಾಜಧಾನಿಯ ಮೈಸೂರ್ ಪಟ್ಟಣ ಮಾದರಿಯ ನವರೀತಿಲಿ
ಸೋಜಿಗದಿ ರಾಜಿಪುದು ಶ್ರೀ ಜಯಚಾಮರಾಜರ ಕೃಪೆಯಲಿ ॥

ಚಾಲು

ಶೇಷನಗಿರಿಹರಿ ದಾಸಪುಟ್ಟಣ್ಣನ ಲೇಸಿನ ಕರುಣವು ನಮಗಾಯ್ತು
ಪೋಷಿಪ ಶ್ರೀಗುರು ಕವಿರಾಢ್ ನಂಜನದಾಸ ನೀಲ್ಕಂಠನ ಪದವಾಯ್ತು ॥

೧೯೩೩

## ೨. ಬೆಂಗಳೂರು ಗಣಪತಿ ಸತ್ಯಾಗ್ರಹದ ಲಾವಣಿ

ಶ್ರೀಕರವೆನಿಸಿದ ಈ ಕರ್ನಾಟಕ ಲೋಕದಿ ಬೆಂಗ್ಳೂರ್ಮೆರೆಯುತಲಿ
ಅಕಾರ ಸಕಾರ ಮಕಾರರೇಕದಿ ಕುಕುಟ ಪರಾಕ್ರಮ ತೋರುತಲಿ ॥ಪಲ್ಲವಿ॥

೧ ಕುಡೀಚಾಲ್

ವಿದ್ಯಾಶಾಲೆಯು ಇದ್ದಿತು ಬೆಂಗ್ಳೂರ್ ಸಿದ್ದೀಕಟ್ಟೆ ಸಮೀಪದಲಿ
ಸಿದ್ಧಿ ಗಣಪತಿಯು ಮೊದಲಿಂದಿದ್ದಿತು ಪ್ರಸಿದ್ಧ ಮಿಡ್ಲಿಸ್ಕೂಲಿನಲಿ ॥

ಇದ್ದ ಗಣೇಶನ ಪೂಜಿಸುತ್ತಿದ್ದರು ವಿದ್ಯಾರ್ಥಿಗಳತಿ ಶ್ರದ್ಧೆಯಲಿ
ಮುದ್ದು ಗಣಪತಿಗೆ ಮಂಟಪ ಕಟ್ಟಿಸಿ ಇದ್ದರು ಬಾಲರು ಭಕ್ತಿಯಲಿ ॥

ಎದ್ದು ಬರಲು ಖಾನ್ ಬಹದ್ದೂರರು ಮುದ್ದು ಗಣಪ ಮುಂಭಾಗದಲಿ
ರೌದ್ರವೇರಿತತಿ ಕ್ಷುದ್ರಮನುಜರಿಗೆ ಸಿದ್ಧಿ ಗಣಪತಿಯ ವಿಷಯದಲಿ ॥

ಖುದ್ದು ನಡೆಸಿದರು ಮಸಲತ್ ವಿದ್ಯವ ವಿದ್ಯಾಶಾಲೆಯ ಮುಖ್ಯರಲಿ
ಭದ್ರಪಡಿಸಿದರು ಸಿದ್ಧಿಗಣಪತಿಯ ವಿದ್ಯಾಶಾಲೆಯ ಕೊಠಡಿಯಲಿ ॥

ವುಡನ್

ದಿನದಿನಕೇರಿತು ಖಾನರ ಕಪಟ ಗಣಪತಿಗೆ ಸಲು ಮಸಲತ್ತು

ಜನಗಳ ಕೈವಶ ಮಾಡಿಕೊಂಡರು ಹೀನಕೃತ್ಯಕೆ ಜನ ತುರ್‍ತ ॥
ದಿನಮಣಿ ಬಾಲರು ಖಾನರ ಕಪಟವ ಅಣಗಿಸಲೊರಟರು ಘೋಷಿಸುತ
ಒಣಗಿತು ಮುಖಕಳೆ ಖಾನರಿಗೀಕ್ಷಣ ದೀನಬಾಲಕರ ದೂಷಿಸುತ ॥

ಚಿಕ್ಕುಡನ್

ಹಟವನೇ ಓಡಿದರು ಸ್ಕೂಲಿನ ಬಾಲಕರೆಲ್ಲ
ಘಟಬಿದ್ದರು ಸಮ್ಮತಿ ಗಣಪತಿ ಬಿಡುವವರಲ್ಲ
ಪಟ ಒಂದನು ಮರೆಸುತ ಗಣಪತಿ ವಿಷಯವನ್ನೆಲ್ಲ
ದಿಟವನೇ ಸಾರಿದರು ಬೆಂಗ್ಳೂರ್ ಪ್ರಜೆಗಳಿಗೆಲ್ಲ ॥

ಗುಲ್ಲುಡನ್

ಹುಡುಗರುಽ ಧ್ಯಾನಿಸಿ ಗಣಪತಿಯ
ನಡೆದರುಽ ಕೂಗುತ ಪರಿಪರಿಯ
ಹಿಡಿದರುಽ ಮುಷ್ಕರ ದಿನಚರಿಯಽ
ಕೊಡಿಸಿರಿ ಗಣಪತಿ ನಡೆಸೇವ್ ಪೂಜೆಯ ನೋಡ್ವಿರಿ ವೈಖರಿಯಽ ॥

ಶ್ಲೋಕ

ಹಿಂದು ಬಾಲರು ಬಂದು ಬೇಡಿದರ್‍ತಂದು ಕೊಡಿ ನಮ್ ಗಣಪನ
ಎಂದು ಕೇಳಲು ಕೇಳದಂದರು ಹೊಂದಿಕೊಂಡರು ದುರ್ಜನ ॥

ಚಾಲ್

ಶೋಕದಿ ಹೊರಟರು ಏಕದಿ ಬಾಲರು ಕೇಕೆಯನಾಕುತ ಬೀದಿಯಲಿ
ಅಕಾರ್‍ಸಕಾರ ಮಕಾರರೇಕದಿ ಕುಕಟ ಪರಾಕ್ರಮ ತೋರುತಲಿ ॥

೨

ಮಸಲತ್ಮಾಡುತ ಅಬ್ಬಾಸ್ಖಾನರು ಮುಸಲ್ಮಾನರೊಳು ಯೋಚಿಸುತ
ವಸೂಲ್ಮಾಡಿದರು ಚಂದಾ ಹಣವನು ಫೆಷಲ್ಪೋರರನು ಕೂಡಿಸುತ ॥
ವಿಶೇಷ ನೆರೆದರು ಅಸಲ್ಫಾಟಿ ಜನ ಹೊಸ ಮಜ್ಜನಕೆ ನಿಜ ನಸುನಗುತ
ಮೀಸೆಯ ತಿರುವುತ ಸೇರಿದರತಿಜನ ನಾವ್ ಷರಿಕಿರುವೆವು ನಿಮಗೆನುತ ॥
ಹುಸುರಿ ಬುರುಡೆಯನು ಸ್ಕೂಲಿನ ಗಲಭೆಗೆ ಸುಬ್ರಹ್ಮಣ್ಯರೆ ಮುಂದೆನುತ
ಅಸಮ ತಿವಾರಿಯ ಕೈಸೆರೆ ಹಿಡಿಸಿರಿ ಭೀಮರಾಯರನು ಜೊತ್ತೆಲೆನುತ ॥
ಈ ಸಮಯದಿ ಆ ಸ್ಕೂಲಿನ ಬಾಲರು ಗಣಪತಿ ಸೆರೆಯನು ಬಿಡಿರೆನುತ
ಹಸುತೃಷೆ ಅಣಗಿಸಿ ಹಟವನೆ ಹಿಡಿದರು ವಿಷಯ ಕೇಳೆ ಬಹು ಮನಕೊರೆತ॥

ವುಡನ್

ಹುಡುಕುತ ಬಂದರು ವಡಕುಗಾರರು ಸುಬ್ರಹ್ಮಣ್ಯರ ಬಿರಬಿರಿಯ
ಬಿಡದೆ ಹಿಡಿದರುಽ ಭೀಮರಾಯರನು ಒಡನೆ ರಾಮಲಾಲ್ ತಿವಾರಿಯು ॥
ಹಿಡಿದು ಮೂವ್ವರನು ನುಡಿದರೀಪರಿ ನೋಡಿ ಬನ್ನಿ ನೀವ್ ಸೆರೆಮನೆಯ
ಹುಡುಗರ್ಮುಖಂಡರ ಹಿಡಿದರೆನ್ನುತಲಿ ಪಡೆದರಿಮಾನೀ ನಿಜ ಖುಷಿಯ ॥

ಚಿಕ್ಕುಡನ್

ಏಕದಿಽ ಹೊರಟು ಹುಡುಗರನೇಕರು ಕೂಡಿ
ವ್ಯಾಕುಲದಿ ಸೆರೆಮನೆಯ ಅಧಿಕಾರಿಗಳನು ನೋಡಿ
ಯಾಕಿವರನು ಹಿಡಿದಿರಿ ಬಿಡಿಬಿಡಿರೆಂಬುತ ಬೇಡಿ
ಸಾಕಾಗಲು ಸೆರೆಮನೆ ಕನ್ನಡಿ ಹುಡಿಹುಡಿ ಮಾಡಿ ॥

## ಗುಲ್ ವುಡನ್

ಹುಡುಗರು ದಿವಾನ್ ಬಂಗ್ಲೆ ಕಡೆಗೆ
ನಡೆದರುಽ ಬೇಡಲು ಸಚಿವರಿಗೆ
ಬಿಡದಲೆ ತಡೆದರು ಗೇಟೊಳಗೆ ॥
ಪುಡಿಪುಡಿ ಮಾಡ್ದರು ಚಮನ್ ಕುಂಡಗಳು ದಿವಾನ್ ಬಂಗ್ಲೆಯೊಳಗೆ ॥

### ಶ್ಲೋಕ

ಪೇಳಲಸದಳ ಜೈಲ ಬಳಿಯೊಳು ಬಾಲಕರ ಕೋಲಾಹಲ
ಕೇಳಿಬಂದಿತು ಮಿಲ್ಟ್ರಿ ಪೌಜು ಸಾಲು ಕುದುರೆ ಸವಾರ್ದಳ ॥

### ಚಾಲ್

ಝೋಕಲಿ ಬಂದರು ಮಿರ್ಜಾ ವಜೀರರು ವ್ಯಾಕುಲ ತೋರಲು ಬಾಲರಲಿ
ಅಕಾರ್ ಸಕಾರ ಮಕಾರರೇಕದಿ ಕುಕುಟ ಪರಾಕ್ರಮ ತೋರುತಲಿ ॥

೩

ಬಂದ ದಿವಾನರ ವಂದಿಸಿ ಬಹುತೆರ ಬಂಧ ಬಿಡಿಸಿ ಅತ್ರಿ ಜನರನ
ಎಂದು ಬೇಡಿದರು ಹಿಂದು ಬಾಲಕರು ಮುಂದೆ ಸಾರಿ ಆ ಸಚಿವರನ ॥
ಒಂದು ಕೇಳದಲೆ ಕಂದರ ಕುಂದನು ಮುಂದು ಮಾಡೆ ಮೋಟಾರ್ ಗಮನ
ಒಂದೆರಡೇಟಿಗೆ ಚಿಂದಿಯ ಮಾಡ್ದರು ಮಂದ ಪ್ರಾಜ್ಞನಾ ಸುಲೋಚನ ॥
ಬಂದಿತು ರೋಷವು ತೊಂದರೆ ಮಾಡ್ದರು ಎಂದು ಕರೆದು ಸರದಾರರನ
ಕುಂದು ಮಾಡಿರೆಂದಪ್ಪಣೆ ಕೊಟ್ಟರು ಹಿಂದೂ ಬಾಲರ ಮಂಡಲಿನ ॥
ಅಂದದ್ದೇ ತಡ ದುಂದು ಸವಾರರು ಬಂದು ತೋರೆ ತಮ ವೀರತನ

ಒಂದೇ ಭರದೊಳು ಕುದುರೆಯನ್ಹಾರಿಸಿ ಕೊಂದರು ಭರ್ಜಿಲಿ ಬಾಲರನ ॥
ಬಂದಿತು ಸುದ್ದಿ ಹಿಂದೂ ಜನರಿಗೆ ಬಂದರು ಜೈಲಿನ ಬಳಿ ಬಿರನ
ಕುಂದು ಮಾಡಿದರೆ ಕಂದರೆ ನಿಮ್ಮನು ಎಂದು ಸುರಿಸಿ ಕಣ್ಣೀರು ಜನ॥

ಉಡನ್

ಬಿಡಿಬಿಡಿರೆನ್ನುತ ಓಡಿದ ಮುವ್ವರನು ನಡೆದರು ಜೈಲಿನ ಕಡೆದುಂದ
ಬಿಡುವ ತನಕ ನಾವ್ ನಡೆಸುವದಿಲ್ಲವು ಗಣಪತಿ ಪೂಜೆಯ ಕ್ರಮದಿಂದ
ಗಡಿಬಿಡಿ ತಡೆಯದೆ ತ್ರಿಮೂರ್ತಿಗಳನೂ ಬಿಡುಗಡೆ ಮಾಡ್ದರು ಸೆರೆಯಿಂದ
ಸಡಗರದಿಂದಲಿ ಮೆರೆಸುತಲವರನು ನಡೆದರು ಸ್ಕೂಲಿಗೆ ಭರದಿಂದ ॥

ಚಿಕ್ಕುಡನ್

ಸಂಧಿಯನು ನಡೆಸೆ ಖಾನ್ ತಂದುಕೊಂಡು ಪುಂಡರನ
ಬಂಧನದಿ ಬಿಡುಗಡೆS ಹೊಂದಿ ಬಂದ ಮೂವ್ವರನ
ಹಿಂದುಗಳ ಹೊಡೆಯಿರಿ ಚಿಂದಿಮಾಡಿ ಗಣಪತಿನ
ಮುಂದೊದಗುವ ದುಂದನು ನೋಡಿಕೊಳ್ವೆ ನಾನದನ ॥

ಗುಲ್ಲುಡನ್

ಕೂಡಿದರು ಪಕ್ಕ ಗುಮಾನಿಯರು
ಕೇಡಿಗಳು ಕೆಂಪುಮಾರಿ ಜನರು
ಹೇಡಿಗಳು ಹೆಂಡ ಹೊಡೆದು ಜೋರು
ಕೂಡಿಕೊಂಡಿದ್ದರು ಲಡಾಯ್ ಮಾಡಲು ಖಾನ್ ಮಹಡಿಲಿವರುS ॥

ಶ್ಲೋಕ

ಸೆರೆಯ ಬಿಡುಗಡೆ ಹೊಂದಿ ಬಂದರು ಸತ್ಯಾಗ್ರಹ ಪ್ರಾಮುಖ್ಯರು

ಪರಮ ಹರುಷದಿ ಮೆರೆಸುತವರನು ನಡೆದರ್ ಪ್ರಜೆ ಶ್ರೀಮಂತರು ॥

ಚಾಲ್

ಕೇಕೆಯನಾಕುತ ಠೀಕಿಲಿ ತಂದರು ಎತ್ತಿ ಮುಖಂಡರ ಮೆರೆಸುತಲಿ
ಚಕಂಚಕೀಬಲೆ ಚಮತ್ಕಾರವಿದೆ ಬೆಂಗಳೂರಿನಾ ಜಂಗಿನಲಿ ॥

೨

ಸೇರಿದರ್ ಸೆರೆಮನೆ ಬಿಡುಗಡೆ ಹೊಂದಿದ ಸತ್ಯಾಗ್ರಹಿಗಳು ಸ್ಕೂಲಿನಲಿ
ಹರುಷದಿ ಲಕ್ಚರ್ ಕೊಟ್ಟರನೇಕರು ಗಣಪತಿ ಪೂಜೆ ವಿಶೇಷದಲಿ ॥
ಇರುತಿರಲೀಪರಿ ಕಲ್ಲು ಜೋಡುಗಳು ಸುರಿಮಳೆ ಸುರಿದಿತು ಭರ್‌ಸಭೆಲಿ
ಸೇರಿಕೊಂಡಿದ್ದರು ಹರಾಮಖೋರರು ಖಾನ ಬಹದ್ದೂರರ ಮನೆಲಿ ॥
ಅರಿಯದ ಬಾಲರ ಪರಿಪರಿ ಹೊಡೆದರು ತುರುಕ ಫಕೀರರು ಕೋಲಿನಲಿ
ಹರಹರಯೆನ್ನುತ ಕಿರುಚುತ ಬಿದ್ದರು ತುರುಕರ ಪೆಟ್ಟಿಗೆ ಅರಚುತಲಿ ॥
ತೂರುತ ಬಂದರು ತುರುಕರ ತುಂಟರು ತೋರುತ ಆಯುಧ ಕೈಗಳಲಿ
ತಿರುವಿದರ್ ಕಟ್ಟಿಗೆ ವರಸೆ ಅನೇಕರು ಧೀರಿ ಕಲೀಜನ ಚೂರಿಯಲಿ ॥

ಉಡನ್

ಲಟಲಟಲಟ್ಟಾ ತಿರುವುವನೊಬ್ಬನು ಏಟನು ತಿಂದನು ಹುಡುಗೊಬ್ಬ
ಬೇಟೆಯನಾಡುವ ತುರುಕನು ಒಬ್ಬನು ಓಟವನೋಡೆ ಯುವ ಹುಡುಗೊಬ್ಬ
ದಿಟದಿಟ ದೊಣ್ಣೆಲಿ ಬಡಿಯುವನೊಬ್ಬನು ವಟವಟ ಬೈಯ್ಯುವ ಹುಡುಗೊಬ್ಬ
ಈಟಿಯ ತೋರುತ ತಿವಿಯುವನೊಬ್ಬನು ಘಟವನೆ ಬಿಟ್ಟನು ಹುಡುಗೊಬ್ಬ ॥

ಚಿಕ್ಕುಡನ್

ಇಷ್ಟೊತ್ತಿಗೆ ಬಂದಿತು ಕುದುರೆ ಪೌಜು ಗಡಬಡನೆ

ಇಷ್ಟಾಗಲು ಮೊದಲೇ ಪೋಲೀಸ್ ಜನರು ದೌಡನ್ನೆ
ಬಿಟ್ಟಿದ್ದರು ಹಿಡಿಯದೆ ತುರುಕ ತುಂಡ ಜನರನ್ನೇ
ಎಷ್ಟ್ಹೇಳಲು ತೀರದು ದುಷ್ಟ ಜನರ ನಡೆಯನ್ನೇ ॥

ಗುಲ್ಲುಡನ್

ಇಷ್ಟರೊಳು ಡಂ ಡಂ ಶಬ್ದಗಳು
ತಟ್ಟನೆS ಹಾರಿತು ಗುಂಡುಗಳು
ಪಟ್ಟರುS ಹುಡುಗರು ಭೀತಿ ಬಲು
ಕಟ್ಟೆಯ ಮೇಲ್ ಕುಳಿತಿದ್ದ ಚಂದ್ರನಿಗೆ ತಾಗಿತು ಗುಂಡುಗಳು ॥

ಶ್ಲೋಕ

ಮೊದಲೆ ಮಸಲತ್ ನಡೆದು ಇದ್ದಿತು ಪುಂಡ ಜನರೊಳು ತರ್‌ತರ
ಇದರ ಮೇಲ್ನಾವ್ ಪೇಳ್ವದೇನಿದೆ ಕೇಳ್ವರ್ಯಾರೀ ಅಲ್ಪರS ॥

ಚಾಲ್

ಆ ಕಡೆ ಈ ಕಡೆ ತೂರಿ ಪರಾರಿ ಪೋಕರಿ ಪುಂಡರು ಸಂದಿನಲಿ
ಸಕಲರು ಕೇಳಿರಿ ಟಕಬಿಕಿ ವೀರರು ಜಂಗು ನಡೆಸೆ ಬೆಂಗ್ಳೂರಿನಲಿ ॥

೫

ಏನ ಹೇಳುವುದು ಖಾನರ ಸಾಹಸS ಮೋಟಾರ್ ಬಂಡಿಲಿ ಬಲೆಮೋಸ
ಖೂನಿಖೋರರನು ಸಾಗಿಸಿಬಿಟ್ಟರು ಘೋಷ ಘೋಷಯೆಂದಾ ದಿವಸ ॥
ಮುನಿದು ಬಿದ್ದಿದ್ದಿತು ಮಂಟಪದ್ಹೊರಗಡೆ ಗಣಪತಿ ಪ್ರತಿಮೆಯು ಅತಿಕ್ಲೇಶ
ಹೀನ ಫಕೀರರ ಕೇಳುವರಿಲ್ಲವು ಖಾನರಿಗಾಯಿತು ಮನ ಹರುಷ ॥

ಧೀನ್ ಧೀನ್‌ಯೆನ್ನುತ ಮಜ್ಮ ಒಂದ್ಹೊರಟಿತು ಧೀನ್ಧಾರಾವಳಿ ಜಯಘೋಷ
ದೀನೋದ್ಧಾರರು ನೋಡಿದರಿದನುS ಖಾನಾಪೀರರ ಒಣರೋಷ ॥
ದೀನ ಬಾಲಕರ ಹೊಡೆದರೆನ್ನುತಲಿ ಕರ್ನಾಟಕ ಜನ ಬಲು ಬಿರಸ
ಪುನಗಿಟ್ಬಾಡಿಸಿ ಹೊಡೆದು ಕೆಡಹಿದರು ಕಂಡ ಕಡೆಲಿ ಪುಂಡರ ಶಿರಸ ॥
ಏನನರಿಯದS ಸ್ವಾನುಭವಿಗಳುS ಒದರಿದರೇನಿದೆ ಹೊಲಸ್ಹೊಲಸ
ಘನತೆಯನೇರಲು ಅಕಾರ್ಮಕಾರರು ಮಾಡಿದರ್ ತಿರ್ಕಸ್ಸಿನ ಕೆಲಸ ॥

ಉಡನ್

ಗೊಂದಲವೆಸಗಿದ ಮುಂದಿನ ದಿನವೇ ಸಂದುಗಳಲಿ ಮಿಲ್ಟ್ರೀಪಾರ
ಹಿಂದು ಜನಗಳು ಬಂದನುಮಾಡಿದರೊಂದಿನ ಅಂಗಡಿಗಳ ಪೂರ
ಮುಂದಿನ ದುಂದಿಗೆ ನೂರ್ನಲ್ವತ್ತಾಲ್ಕನೆ ಸೆಕ್ಷನ್ ತೋರಿಸೆ ಸರಕಾರ
ಅಂದಿಗೆ ಅಣಗಿತು ದಾಂಧಲೆಯೆಲ್ಲವು ಎಂದಿನಂತೆ ಸಮ ಪುರವಿವರ ॥

ಚಿಕ್ಕುಡನ್

ದಂಗೆಯS ವಿಚಾರಣೆ ನಡೆದುಹೋಯ್ತು ಕೋರ್ಟಿನಲಿ
ಢಂಗಾದರು ಮೂರ್ಖರು ಢೋಂಗಿ ಹೊಡೆದು ನ್ಯಾಯದಲಿ
ಶೃಂಗಾರದಿ ಮೆರೆಯುವ ಬೆಂಗಳೂರು ಶಹರಿನಲಿ
ಮಂಗಳವು ನೆಲೆಸಿ ಶ್ರೀ ಕೃಷ್ಣ ಭೂಪ ರಾಜ್ಯದಲಿ ॥

ಗುಲ್ಲುಡನ್

ಕುಂಭಿಣಿಲಿ ಬೆಂಗಳೂರಿನಲ್ಲಿ
ಸಂಭ್ರಮದಿ ಮಿಡ್ಲಿಸ್ಕೂಲಿನಲ್ಲಿ

ಒಂಬೈನೂರಿಪ್ಪತ್ತೆಂಟರಲ್ಲಿ
ತುಂಬಿದರ್ ಬಹುಜನ ಸೆಪ್ಟಂಬರ್ ಹದಿನೇಳನೆ ತೇದಿಯಲಿ ॥

ಶ್ಲೋಕ

ಬಿದ್ದ ಗಣಪನ ಸಿದ್ಧ ಪಡಿಸಿದರ್ ವಿದ್ಯಶಾಲೆಯ ಬಾಲರು
ಸಿದ್ಧಿ ಗಣಪನ ಪೂಜೆಗೈದರು ಜಯ ಜಯೆನ್ನುತ ಸರ್ವರು ॥

ಚಾಲ್

ಈ ಕವಿ ರಚಿಸಿದೆ ತುರಾ ನಿರಂಜನ್ ಗುರು ತುಕನ್‌ಗಿರಿ ಆಜ್ಞೆಯಲಿ
ನೀ ಕೃಪೆ ತೋರ್ಯೆ ಶೇಷನ್‌ಗಿರಿಹರಿ ನೀಲಕಂಠ ನಾರಾಯ್ಣರಲಿ.

೧೯೨೮

* * *

# ೩. ಶಿವಪುರ ಮತ್ತು ವಿದುರಾಶ್ವತ್ಥದ ಲಾವಣಿ

ಧಾಟಿ – ಖಡೀಚಾಲ್

ಸತ್ಯಸಮರದಾ ಹತ್ಯ ಪೇಳುವೆನು ಚಿತ್ತದಿ ಲಾಲಿಸಿರಿದು ಸತ್ಯ
ಮರ್ತ್ಯದೊಳಾರ್ಯಾವರ್ತದ ವಿದುರಾಶ್ವತ್ಥ ವಿಚಿತ್ರದ ಘನಹತ್ಯ ॥ಪಲ್ಲವಿ॥

ವಿಶಾಲ ಮೈಸೂರ್ ಪ್ರಸಾರ ಕಾಂಗ್ರೆಸ್ ಪ್ರಸಂಗ ಲಾವಣಿ ಕವಿ ಸರಸ
ಪಾಷಾಣ ಹೃದಯದ ದೇಶೀಯ ಜನರಿಗೆ ಲೇಸಾದರಿಲ್ಲವು ಕರುಣ ರಸ ॥
ಆ ಶಿವಪುರದೊಳು ದೇಶಿಯ ಪ್ರಜೆಗಳು ಬೋ ಶಿಸ್ತು ತೋರಿದರೊಮ್ಮನಸ
ದೇಶೀಯ ಪ್ರಮುಖರು ನಿಶಾನಿ ಏರಿಸಿ ಬಾರ್ಸಿದರ್ ಭೇರಿಯ ಜಯಘೋಷ॥
ಕುಶಾಗ್ರ ನೀತಿಯ ಮೈಸೂರ್ ಸರ್ಕಾರವು ಸೆಕ್ಷನ್ ಚಲಾಯ್ಸಲು ಬಲು ಬಿರುಸ
ದೇಶೀ ಮುಖಂಡರು ಸೆಕ್ಷನ್ ಉಲ್ಲಂಘಿಸಿ ಸೈ ಎಂದಿನಿಸಿದರಾ ದಿವಸ ॥

ದೊಡ್ಡಡನ್

ಶಿವಪುರದೊಳು ನಮ್ ಸುವಿಮಲ ಚರಿತರು ತ್ರಿವರ್ಣರಾಟೆಯ ಧ್ವಜವೆತ್ತೆ
ಬವಣೆಯ ಪಡುತಲಿ ಅವಿನಯ ಲ್ಯಾನ್ಸರ್ಸ್ ಕೋವಿಲಾಠಿಗಳನಿಡಿಯುತ್ತೆ ॥
ತವಕದಿ ಬಂದಿತು ಕವಿಯುತ ಕಾಂಗ್ರೆಸ್ ಸುವಿಮಲಚರಿತರ ಪಿಡಿಯುತ್ತೆ
ಶಿವಶಿವ ಈ ಪರಿ ಅವಿಚಾರದಿ ಉದ್ಭವಿಸಿತು ಕ್ರಾಂತಿಯು ಸುತ್ತ ಮುತ್ತೆ ॥

ಶ್ಲೋಕ

ಮುದದಿ ಕಾಂಗ್ರೆಸ್ ಧ್ವಜವನೆತ್ತಿದ ಪ್ರಮುಖರಿಗೆ ಜೈಲಾಯಿತು
ಇದುವೆ ವಿದುರಾಶ್ವತ್ಥ ಗಲಭೆಗೆ ಮುಖ್ಯ ಕಾರಣವಾಯಿತು ॥

ಚಾಲ್

ಸತ್ಯಮಹಾತ್ಮರ ಸತ್ವವನರಿಯದೆ ಹತ್ಯವಗೈಯುವುದ್ಯಾವ್ ಕೃತ್ಯ?

ಮರ್ತ್ಯದೊಳಾರ್‍ಯಾವರ್ತದ ವಿದುರಾಶ್ವತ್ಥ ವಿಚಿತ್ರದ ಘನಹತ್ಯ ॥

೨

ಘನ ಸರ್ದಾರರ ರಣ ದಬ್ಬಾಳಿಕೆ ದಿನಚರಿ ಅಬ್ಬರವೇರಿಹುದು
ಜನಗಣವೆಂಬುವ ಗಣನೆಯೆ ಇಲ್ಲದೆ ಜನರನೆ ಜರ್ಝರಗೊಳಿಸಿಹುದು ॥
ಜನರಿಂದಲ್ಲವೆ ಘನಸರ್ಕಾರಕೆ ಧನ ಧಾನ್ಯಂಗಳು ಒದಗುವುದು
ಜನಗಳ ಕೊಂದರೆ ಘನ ರಾಜ್ಯಾಂಗದ ಘನತೆಯು ಮತ್ತೆಲ್ಲುಳಿಯುವುದು?
ಜನತೆಯ ಕಾಡುವ ಘನತೆಯ ರಾಜ್ಯಕೆ ಹೀನಭೂತವೊಂದಂಟಿದುದು
ಹೀನ ಭೂತವಾ ದೇವನಹಳ್ಳಿಯ ಜ್ಞಾನಪೂಜೆ*ಯಿಂದೋಡಿದುದು ॥

ದೊಡ್ಡುಡನ್

ಒಂಬೈನೂರ್ ಮುವ್ವತ್ತೆಂಟನೆ ಏಪ್ರಿಲ್ ತಿಂಗಳ ಇಪ್ಪತ್ತೈದರೊಳು
ತುಂಬಿರೆ ಬಹುಪ್ರಜೆ ಸಂಭ್ರಮದಿಂದಲಿ ವಿದುರಾಶ್ವತ್ಥದ ಜಾತ್ರೆಯೊಳು ॥
ಸ್ತಂಭದಿ ಮೆರೆಯುವ ಧ್ವಜಸತ್ಯಾಗ್ರಹ ಕಾಂಗ್ರೆಸ್ ಕೂಟದಿ ಕೂಡಿರಲು
ಡಂಭಕರಾ ಪ್ರಜ ದ್ರೋಹಿಗಳಲವರು ಢಂ ಢಂ ಹೊಡೆದರು ಗುಂಡುಗಳು ॥

ಶ್ಲೋಕ

ಸುತ್ತಮುತ್ತಲು ಲಾಠಿ ಹೊಡೆತಗಳ್ ಮತ್ತೆ ಗುಂಡಿನ ಏಟುಗಳ್
ಸತ್ತ ಹೆಣಗಳ ಲೆಕ್ಕವಿಲ್ಲವು ಹೊತ್ತರೆಷ್ಟೋ ಗುಪ್ತದೊಳ್ ॥

ಚಾಲ್

ಸತ್ಯವು ಕೇಳಿರಿ ಮಿಥ್ಯವಿದಲ್ಲವು ಹತ್ಯ ಹತ್ಯ ಸ್ತ್ರೀ ಶಿಶುಹತ್ಯ
ಮರ್ತ್ಯದೊಳಾರ್‍ಯಾವರ್ತದ ವಿದುರಾಶ್ವತ್ಥ ವಿಚಿತ್ರದ ಘನಹತ್ಯ ॥

* ಪೊರಕೆ ಏಟು. ದೇವನಹಳ್ಳಿ ಪೊರಕೆಗೆ ಪ್ರಸಿದ್ಧ.

೩

ಗೌರಮ್ಮ ಎಂಬುವ ಗರ್ಭಿಣಿ ಹೆಣ್ಣನು ಗರ್ವದಿ ಕೊಂದರು ಕೈಯ್ಯಾರ
ಸಾರ್ವಜನರ ಮೇಲ್ ಗುಂಡಿನ ಸುರಿಮಳೆ ಸುರಿಸಿದರು ಘೋರ ವೈಯಾರ ॥
ವಿರಾಟಪುತ್ರರ ಭರಾಟ ಭಾರತ ಕರಾಟಕ್ಕಿಂತಲು ವಿಸ್ತಾರ
ನಿರಾಳಗೈದರು ನಿರಾಯುಧಾ ಮೇಣ್ ನಿರಾಪರಾಧಿಗಳ್ ಸಂಹಾರ ॥
ಎರಿಸಿ ಗುಂಡನು ಹಾರಿಸಿದಾಕ್ಷಣ ನೂರಾರು ಕಪಿಗಳು ಭಯಂಕರ
ಕಿರ್‍ರೆಂದು ಕಿರಚುತ ಕೊರ್‍ರೆಂದು ಕೊರಗುತ ಗಿರ್‍ರೆಂದು ಸತ್ತವು ತರಾತರ ॥

ದೊಡ್ಡುಡನ್

ಇಡೀ ಪ್ರಪಂಚವೇ ನಡುಗಿತು ಈ ಘನ ಗಡಿಬಿಡಿ ಕೇಳಿದ ಕ್ಷಣದೊಳಗೆ
ಗೌಡ ಗಾವಿಲರು ಹೂಡಿದ ತಂತ್ರದಿ ಕೇಡೆಲೆ ಒದಗಿತು ಕಡೆಯೊಳಗೆ ॥
ಬಡತನದಿಂದಲೆ ಬೆಳೆದಾ ವೃಷಭನ ಬಡಾಯಿ ಬಹಳಾ ರಣದೊಳಗೆ
ಸಡಗರದಿಂದಲಿ ಹಿಡಿದು ರಿವಾಲ್ವರ್ ಹೊಡೆದರು ಪ್ರಜೆಗಳ ಭರದೊಳಗೆ ॥

ಶ್ಲೋಕ

ಘೋರ ವಿದುರಾಶ್ವತ್ಥ ಹತ್ಯದ ನ್ಯಾಯ ಕಡೆಗಿದು ಖಂಡಿತ
ಶ್ರೀ ರಮೇಶಂ ಸಮಿತಿ ವಿವರವು ಶ್ರೀ ರಮಣನಿಗೆ ಅರ್ಪಿತ ॥

ಸತ್ಯವು ಶ್ರೀ ಗುರು ಪುಟ್ಟಸಂಜಣ್ಣರ ಭಕ್ತ ನೀಲ್ಕಂಠನ ಸಾಹಿತ್ಯ
ಮರ್ತ್ಯದೊಳಾರ್‍ಯಾವರ್ತದ ವಿದುರಾಶ್ವತ್ಥ ವಿಚಿತ್ರದ ಘನಹತ್ಯ ॥

* * *

## ೪. ಭಾರತ ಸ್ವಾತಂತ್ರ್ಯ ಚಳವಳಿಯ ಲಾವಣಿ

### ಧಾಟಿ–ಖಡೀಚಾಲ್

ಭಾರತವರ್ಷದ ವೀರಾಗ್ರಣಿಗಳ ಹೋರಾಟದ ಘನ ಚರಿತೆಯನ
ಭಾರತೀಯ ಸ್ವಾತಂತ್ರ್ಯದ ಸಮರದ ಸಾರವನರಿಯಿರಿ ಸೂರಿಜನ ॥

ಸತ್ಯವು ಸಾವಿರದೆಂಟ್ನೂರ್ಐವತ್ತೇಳನೆ ಇಸವಿಲಿ ಬ್ರಿಟೀಷರು
ಗತ್ತಿನ ಝಾನ್ಸೀ ಲಕ್ಷ್ಮೀಬಾಯ್ ಕೈ ಕತ್ತಿಯ ಬಿರುಸಿಗೆ ಬೆದರಿದ್ದರು ॥
ಮತ್ತೆಲೆ ಸ್ತ್ರೀ ಶಿಶುವೆನ್ನದೆ ರಣದೊಳು ಮೋಸದಿ ಕೊಂದರು ಮಾರ್ಮಿಕರು
ತತ್ತರಪಡುತಲಿ ತಾಂತ್ಯಾತೋಪಿಯ ತಪ್ಪದೆ ಗಲ್ಲಿಗೆ ಹಾಕಿದ್ದರು ॥
ಬಿತ್ತರಭೀಕರ ಸಿಪಾಯಿ ದಂಗೇಲಿ ಸತ್ತರು ಬಹುಜನ ಭಾರತರು
ಸ್ವತಂತ್ರಘೋಷಣೆ ಸಾರಿದ ವೀರರ ಸಾಲುಮರಕೆ ನೇಣೆತ್ತಿದ್ದರು ॥

ಶ್ಲೋಕ

ದಂಗೆಕೋರನು ಎಂದು ರಾವ್‌ಸಾಹೇಬನನ್ನು ಬ್ರಿಟೀಷರು
ದಂಗುಬಡಿಯುವ ದೈತ್ಯವೃತ್ತಿಯ ರೀತಿಯೊಳು ಕೊಂದಿದ್ದರು ॥

ದೊಡ್ಡ ಉಡನ್

ಆವರಿಸುತ ನಮ್‌ದೇಶದ ಸಂಪದ ಸೂರೆಯಗೈಯ್ಯುತ ಮೋದದಲಿ
ತಾವೆಲೆಭಾರತ ಸಾರ್ವಭೌಮರೆಂದಾಕ್ರಮಿಸಿದ್ದರು ಸ್ವೇಚ್ಛೆಯಲಿ
ಈ ವಿಧವೆಲ್ಲವು ಭಾವಿಸಿ ಕಾಂಗ್ರೆಸ್ ಪುಟ್ಟಿತು ಭಾರತ ವರ್ಷದಲಿ

ಸಾವಿರದೆಂಟ್ನೂರ್‌ಎಂಬತ್ತೈದನೆ ಡಿಸೆಂಬರ್ರಿಪ್ಪತ್ತೆಂಟರಲಿ ॥

ಉತಾರ್ ಉಡನ್

ಹೇರಂಭನ ಪ್ರಜೋತ್ಸವನಂತರ ಪ್ರಸಿದ್ಧ ಬೊಂಬಾಯ್ ನಗರದಲಿ
ಪ್ರಾರಂಭಿಸಿದರು ಇಂಡಿಯನ್ ನ್ಯಾಷ್ನಲ್ ಕಾಂಗ್ರೆಸ್ ಎಂಬುತ ಪ್ರಥಮದಲಿ ।
ಸೌರಂಭದೊಳಾ ಉಮೇಶಚಂದಿರ ಬ್ಯಾನರ್ಜಿಯ ನೇತೃತ್ವದಲಿ
ಆರಂಭದ ಸಭೆಕೂಡಿತು ಎಪ್ಪತ್ತೆರಡು ಸದಸ್ಯರ ಸಂಖ್ಯೆಯಲಿ ॥

ಉಡನ್

ತದನಂತರ ದಾದಾಭಾಯ್ ನವರೋಜಿಯ ಭಾಂಕ ।
ಮುದವೇರಿತು ಬದರುದ್ದೀನ ತಯ್ಯಬ್ಜಿಯ ತನಕ ।
ಅದರಾಚೆಗೆ ತಿಲಕರು ಗೋಖಲೆ ಈರ್ವರ ಢಂಕ ।
ಬಿದಿಗೆಯಾ ಚಂದ್ರನಂತೆ ಬೆಳಗಿತು ಕಾಂಗ್ರೆಸ್ ಬಿಂಕ ॥

ಗುಲ್ಲಡನ್

ಅನಂತರ ಹೋಮ್‌ರೂಲ್ ಚಳವಳಿಯು
ದಿನಂಪ್ರತಿ ಹೆಚ್ಚಿತು ಗಡಬಿಡಿಯು
ಘನಾಂತರ ಅಸಹಕಾರಗುರಿಯೂ
ಜನಾನುರಾಗದ ಕಿಲಾಫತ್ ಕಾಂಗ್ರೆಸ್ ಚಳವಳಿ ವ್ಯಾಪನೆಯು ॥

ಶ್ಲೋಕ

ವಾಕ್‌ಸಭಾ ಮೇಣ್ ಪತ್ರಿಕಾ ಸ್ವಾತಂತ್ರ್ಯ ಕಸಿದು ಬ್ರಿಟೀಷರು
ಕಾಕುಮತಿಯೊಳು ನಮ್ಮ ದೇಶವನಾಕ್ರಮಿಸಿ ನಲಿದಿದ್ದರು ॥

ಚಾಲು

ವೀರಾಧಿವೀರರು ಸೇರಿ ಮಾಡಿದರು ಭಾರತಮಾತೆಯ ಸೇವೆಘನ
ಭಾರತೀಯ ಸ್ವಾತಂತ್ರ್ಯದ ಸಮರದ ಸಾರವನರಿಯಿರಿ ಸೂರಿಜನ ॥
ಜಲಿಯನ್‌ವಾಲಾಬಾಗಿನ ಹತ್ಯಾಖಾಂಡದೊಳಾದರೆ ಬ್ರಿಟೀಷರು
ಬಾಲ ವೃದ್ಧ ಸ್ತ್ರೀ ಎನ್ನದೇ ಪ್ರಜೆಗಳ ಫಿರಂಗಿಹಾರಿಸಿ ಕೊಲಿಸಿದ್ದರು ।
ಲಾಲಾಜೀಯನು ಲಾಠಿಯೊಳೊಡೆಸಿದ ವಿಷಯಾಲಂಪಟ ಬ್ರಿಟೀಷರು
ಅಳುಕದೆ ಬೊಂಬಾಯ್ ಬಾಬುಗೇನನನು ಬಲವರ್ಧಿಷ್ಟದಿ ಕೊಂದಿದ್ದರು ॥
ಸೋಲಾಪುರ ಧನಶೆಟ್ಟಿಮಲ್ಲಪ್ಪನ ಶೂಲದೊಳೇರಿಸಿ ಬ್ರಿಟೀಷರು
ಛಲದಿ ಭಗತ್‌ಸಿಂಗ್, ರಾಜಗುರುವು ಶುಕದೇವರ ಶಿರಗಳ ಕಡಿಸಿದ್ದರು ॥

ಶ್ಲೋಕ

ಎಲೆಲೆ ನಮ್ಮಯ ರಾಷ್ಟ್ರವೀರರ ಕೊಲ್ಲಿಸಿರುವ ಬ್ರಿಟೀಷರು
ತೊಲಗಲೆಂಬುತ ಲಲಿತ ಕನ್ನಡ ನಾಡಿಗರು ಸಾರಿದ್ದರು ॥

ದೊಡ್ಡ ಉಡನ್

ಸ್ವತಂತ್ರದೇವತೆ ಝಾನ್ಸಿಯ ಲಕ್ಷ್ಮೀಬಾಯಿಯ ಹಿಂದಿನ ಚರಿತೆಯನು
ಪ್ರತಾಪಸಿಂಹನು ಶಿವಾಜಿಮಹರಾಜ್ ಟೀಪುಸುಲ್ತಾನರ ಶೌರ್ಯವನು ।
ಸತೀಶಿರೋಮಣಿ ಬೆಳವಡಿಮಲ್ಲಮ್ಮ ಕಿತ್ತೂರ್ ಚನ್ನಮ್ಮನ ಸ್ಮರಣೆಯನು
ನಿತ್ಯವು ತಪ್ಪದೆ ಧ್ಯಾನಿಸಬೇಕಿದೆ ಸ್ವತಂತ್ರಕ್ಕೆಣಗಿದ ಸರ್ವರನು ॥

ಉತಾರ್ ಉಡನ್

ನಾನಾ ಹತ್ಯವನೆಸಗಿದ ಸರ್‌ಹ್ಯೂರೋಸನ ನಂತರ ಬ್ರಿಟೀಷರು

ವಿನಾಶಕಾರಕ ವಿದ್ಯಮಾನವನು ವಿನೋದದಿಂದಾಚರಿಸಿದ್ದರು ।
ಕ್ಷೋಣಿಯೊಳದ್ಭುತ ಕೊಹಿನೂರ್‌ವಜ್ರವನಾಗಲೆ ಸಾಗಿಸಿಬಿಟ್ಟಿದ್ದರು
ದೀನತೆಪೊಂದಿದ ದೇಶಿರಾಜರನು ಬೊಂಬೆಗಳಂದದಿ ಕುಣಿಸಿದ್ದರು ।

ಉಡನ್

ಸೈಮನ್ಸ ಕಮೀಷನ್‌ನಂತರ ಕಾಂಗ್ರೆಸ್ ಚರಿತೆ
ರಾಮಾಯ್ಣ ಮುಗಿದು ಮಹಾಭಾರತ ಮೊದಲಾದಂತೆ ।
ಆ ಮಹಾಲಾ ಹೋರಿನ ಕಾಂಗ್ರೆಸ್ ನಿರ್ಣಯದಂತೆ
ಈ ಮಹೀಭರತ ಸ್ವಾತಂತ್ರ್ಯತೆ ಸಾರಿತು ಜನತೆ ॥

ಗುಲ್ಲುಡನ್

ಮುಂದಿನಾ ವಿವರವನೊಂದೊಂದ
ಚಂದದೊಳು ಲಾಲಿಸಿ ಜನವೃಂದ ।
ಗಾಂಧಿಜಿಯು ಅಹಿಂಸವ್ರತದಿಂದಾ
ಹಿಂದೂ ದೇಶದ ಬಂಧನ ಬಿಡಿಸಲು ನಿಂದರು ಹಟದಿಂದಾ ॥

ಶ್ಲೋಕ

ಒಂಬೈನೂರ್ ಮುವ್ವತ್ರ ಜನವರಿ ತೇದಿ ಇಪ್ಪತ್ತಾರರೊಳ್
ಸಂಭ್ರಮದಿ ಸ್ವಾತಂತ್ರ್ಯ ದಿನಾದಾಚಾರಣೆ ನಡೆದಿತು ದೇಶದೊಳ್ ।

ಚಾಲು

ವೀರಪಟೇಲರ ಬಾರ್ಡೋಲಿಯ ಕರನಿರಾಕರಣವತಿ ಸನ್ಮಾನ
ಭಾರತೀಯ ಸ್ವಾತಂತ್ರ್ಯದ ಸಮರದ ಸಾರವನರಿಯಿರಿ ಸೂರಿಜನ ॥

ಉಪ್ಪಿನ ಘನ ಸತ್ಯಾಗ್ರಹ ನಡೆಸಲು ಧರಶನ್‌ಕೋಠಿಯ ಕಡೆ ಪಯಣ
ತಪ್ಪದೆ ಹೊರಟರು ಗಾಂಧಿಮಹಾತ್ಮರು ಕರೆದು ಸರೋಜಿನಿದೇವಿಯನ ॥
ಉಪ್ಪಿನಕೋಠಿಗೆ ಮುತ್ತಿಗೆಹಾಕುತ ಮುರಿದರು ಉಪ್ಪಿನ ಖಟ್ಲೆಯನ
ದರ್ಪದಿ ಬಂಧನಗೈದರು ತಕ್ಷಣ ಕಾಂಗ್ರೆಸ್ ಪ್ರಮುಖರನೆಲ್ಲರನ ॥
ಗಪ್ಪನೆ ದೇಶಾದ್ಯಂತವು ನಡೆಯಿತು ಉಪ್ಪಿನ ಚಳುವಳಿ ಕಾರ್ಯಘನ
ಸಪ್ರೂ–ಜಯಕರ್ ಸಂಧಾನದಿಂದಲಿ ಬೆಪ್ಪಡಿದೋದರು ಆಂಗ್ಲ ಜನ ॥

ಶ್ಲೋಕ

ವೀರಅರವಿಂದರೂ ಮೇಣ್ ಮಾಳವೀಯರು ಆ ಕ್ಷಣ
ಸಾರಿದರು ಸ್ವಾತಂತ್ರ್ಯ ಗರ್ಜನೆ ವೀರಸಾವರ್‌ಕರ್ ಘನ ॥

ದೊಡ್ಡ ಉಡನ್

ಗಾಂಧಿಜಿ ಇರ್ವಿನ್ ಮಾತುಗಳ್ ನಂತರ ಮೂವತ್ತೈದನೆ ಇಸವಿಯೊಳು
ಬಂದಿತು ಇಂಡಿಯಾ ನೂತನ ಶಾಸನ ಸುಧಾರಣೆಯ ಕೆಲ ಅಂಶಗಳು ।
ಹಿಂದು ಮುಸಲ್ಮಾನ್ ಭೇದ ಪ್ರಬಂಧವು ಅದರೊಳಗಿದ್ದಿತು ಚಂದದೊಳು
ಎಂದಿಗು ಆಗದು ಎನ್ನುತ ನುಡಿದರು ಜವಹರಲಾಲರು ತೀವ್ರದೊಳು ॥

ಉತಾರ್ ಉಡನ್

ಆರುಕೋಟಿ ಹರಿಜನರ ರಕ್ಷಣೆಯ ಕುಟಿಲೋಪಾಯಗಳೊಂದು ಕಡೆ
ಬೇರೆಯಾಗಿ ನೀವೆಂದು ಮುಸ್ಲಿಮ್ಮರ ಎತ್ತಿಕಟ್ಟಿ ಮತ್ತೊಂದು ಕಡೆ ।
ಸೇರಿ ಎಲ್ಲರೊಂದಾಗುತ ಬನ್ನಿರಿ ಎಂದು ಕರೆದು ಇನ್ನೊಂದು ಕಡೆ
ಭಾರತೀಯರೊಳು ಭೇದವಕಲ್ಪಿಸಿ ತೊಡಕಿಟ್ಟಿದ್ದರು ಮೂರುಕಡೆ ॥

ಉಡನ್

ಕೊಡಬೇಕು ಎನ್ನತುಲಿ ಜಿನ್ನರು ಪಾಕಿಸ್ಥಾನ
ಕಿಡಿಇಟ್ಟರು ಸ್ವರಾಜ್ಯ ಪ್ರಶ್ನೆಯ ಮೂಲದೊಳದನ
ಗಡಿಬಿಡಿಯೊಳೆ ನಡೆದಿತು ಕಾಂಗ್ರೆಸ್‌ಲೀಗಿನ ಕದನ
ಕಡುಕ್ರಾಂತಿ ದುರಂತಗಳೆಸಗಿತು ದೇಶದೊಳಿನ್ನ ॥

ಗುಲ್ಲುಡಾನ್

ಹಿಂದು ಮುಸಲ್ಮಾನ ಕಲಹದಿಂದ
ಅಂದು ಆ ಬ್ರಿಟೀಷರ್ಗಾನಂದ
ಚಂದದೊಳು ಮೆರೆದರು ನಲವಿಂದಾ
ಮುಂದಿನ ಪ್ರಕರಣದಿಂದಲಿ ಗುಂಡಿಗೆ ಬೆದರಿತು ನಿಜದಿಂದಾ ॥

ಶ್ಲೋಕ

ಭಾರತೀಯರ ವೀರಕಾಂಗ್ರೆಸ್ ತೋರಿದದ್ಭುತ ಕ್ರಮದೊಳು
ವೀರಕನ್ನಡ ಮೈಸೂರ್ ಕಾಂಗ್ರೆಸ್ ಸೇರಿ ದುಡಿದಿತು ಜೊತೆಯೊಳು ।

ಚಾಲು

ಸಾರುತ ಶೌರ್ಯ ಪ್ರದರ್ಶನಗೈದರು ಲಕ್ಷಾಂತರ ಜನ ಬಲಿದಾನ
ಭಾರತೀಯ ಸ್ವಾತಂತ್ರ್ಯದ ಸಮರದ ಸಾರವನರಿಯಿರಿ ಸೂರಿ ಜನ.
ಕೇಳಿರಿ ಮುವತ್ತೇಳನೆ ಇಸವಿಯ ಅಕ್ಟೋಬರಿಪ್ಪತ್ತೈದರೊಳು
ಪೇಳಲಿಕಸದಳ ನರಿಮನ್ ಪ್ರಕರಣ ಬೆಂಗ್ಳೂರ್‌ಬನಪ್ಪಾ ಪಾರ್ಕಿನೊಳು ॥
ಗೋಲಿಯು ವ್ಯಾಪಿಸಿ ಸತ್ತನು ಹರಹರ ಗುಂಡಪ್ಪನು ಗುಂಡೇಟಿನೊಳು
ಲಾಲಿಸಿ ಶಿವಪುರ ಧ್ವಜಸತ್ಯಾಗ್ರಹ ನಡೆದಾ ನಂತರ ಗಲಭೆಗಳು ॥
ಇಳೆಯೊಳು ವಿದುರಾಶ್ವತ್ಥದ ಹತ್ಯವು ನಡೆದಿತು ಮೂವ್ವತ್ತೆಂಟರೊಳು
ನಲವತ್ತೆರಡನೆ ಇಸವಿಯ ಚಳವಳಿ ಕಳವಳ ಆಂಗ್ಲರ ಹೃದಯದೊಳು ॥

### ಶ್ಲೋಕ

ಶಾಂತಿ ಸಮರವು ಕ್ರಾಂತಿ ರೂಪದಿ ನಿಂತು ಮೆರೆದಿತು ದೇಶದಿ
ಭ್ರಾಂತಿಯೊಳು ಸ್ವಾತಂತ್ರ್ಯಪ್ರಿಯರನು ಬಂಧಿಸಿದರತಿ ಕ್ರೋಧದಿ ॥

### ದೊಡ್ಡ ಉಡನ್

ಘನಕೈಗಾರಿಕೆ ಕುಲಸಂಹರಿಸಿದ ಗೋಮುಖವ್ಯಾಘ್ರರು ಬ್ರಿಟೀಷರು
ಖಿನನನ್ಗೈದರು ಢಾಕಾ ಮಲಮಲ್ ತಯಾರಿಪರ ಕೈಬೆರಳಿವರು ।
ಜನಾಂಗರ‍್ಥಕ್ಕಿನ ಜವಾಬ್ದಾರಿಯನು ಜಗದೊಳು ಜೀರಿದ ಬ್ರಿಟೀಷರು
ಮಾನವಕುಲದರಿ ಮೆಕಾಲೆಕಾನೂನ್ ಮಾರಿಯನಾಗಲೆ ಮೆರೆಸಿದ್ದರು ॥

### ಉತಾರ್ ಉಡನ್

ದೇಶಭಕ್ತನಾ ಮಹದೇವ್ ದೇಶಾಯ್ ಸೆರೆಮನೆಯೊಳು ಅಸುನೀಗಿಹುದು
ದೇಶಮಾತೆ ಶ್ರೀ ಕಸ್ತೂರಬಾಯಿಯು ದೇಶದಿ ಕಣ್ಮರೆಯಾಗಿಹುದು ।
ಮೈಸೂರ್ ಕನ್ನಡ ಈಸೂರ್‌ವೀರರು ಪಾಶಿಯಾದ ಪರಿಶ್ಲಾಘ್ಯವದು
ಕಾಸಿನ ದಾಸರಿಗನುಭವವಿಲ್ಲವು ದೇಶದಭಕ್ತರ ತ್ಯಾಗವದು ॥

### ಉಡನ್

ಧಸ್ಸೆನ್ನುವ ಬೆಂಗ್ಳೂರ್ ದಾವಣಗೆರೆಯ ವಿಚಾರ
ಆ ಶ್ರವಣಬೆಳಗೊಳದ ಸಂತೆಯೊಳಾಹಾಕಾರ
ಈ ಸರ್ವಸಂಕಟವು ಸಹಿಸಿತು ಜನಗಣತೀರ
ಲೇಸಾದ ಚಲೇಜಾವ್ ಚಳವಳಿ ಚತುರತೆ ಪೂರಾ ॥

### ಗುಲ್ಲುಡನ್

ಆ ಕಡೆಯ ಭೀಕರ ಸಂಗ್ರಾಮ
ಈ ಕಡೆಗೆ ಆವರಿಸಲು ಅಮಮ
ಕಕಮಕದಿ ಬೆದರಿತು ಜನಸ್ತೋಮಾ

ಸಕಲ ಬ್ರಿಟಿಷರ ಭೀತಿಯಪಡಿಸಿತು ಕಾಂಗ್ರೆಸ್ ಕಾರ್ಯಕ್ರಮ ॥

ಶ್ಲೋಕ

ಸೋಕಿ ಇಲ್ಲಿಗೆ ಸಮರದಾಹವು ಸಾಕುಸಾಕೆಂದೆನಿಸಿತು
ಕಾಕಿನಾಡ್ ಮದರಾಸುಪಟ್ಟಣದೊಳಗೆ ಬಾಂಬುಗಳ್ ಬಿದ್ದಿತು ॥

ಚಾಲು

ತೂರಿಜಪಾನರು ಭಾರತಗಡಿಯೊಳು ತೋರಿದರತಿಶಯ ವೀರತನ
ಭಾರತೀಯ ಸ್ವಾತಂತ್ರ್ಯದ ಸಮರದ ಸಾರವನರಿಯಿರಿ ಸೂರಿಜನ.
ಬ್ರಿಟೀಷರೆದೆ ಝಲ್ಲೆನಿಸಿತು ಕಾಂಗ್ರೆಸ್ ಚಳವಳಿ ಕಾರ್ಯಾಚರಣೆಯಲಿ
ಕುಟಿಲ ತಂತ್ರಗಳು ನಡೆಯದೆ ಹೋಯಿತು ನೇತಾಜಿಫೌಜಿನ ಎದುರಿನಲಿ ॥
ಪಟೇಲರಿಂದಲಿ ನಾವಿಕ ಮುಷ್ಕರ ನಿಂತಿತು ಒಂದೇ ಮಾತಿನಲಿ
ಕಠೋರವೆನಿಸಿದ ಗಾಂಧೀಜಿ ವಾಕ್ಯವು ದಿಟವೆಂದೆನಿಸಿತು ದೇಶದಲಿ ॥
ಸೆಟೆಯಿಲ್ಲದ ಸಂಪೂರ್ಣ ಸ್ವತಂತ್ರ್ಯವು ಲಭಿಸಿತು ನಲವತ್ತೇಳರಲಿ
ತಟವಟದಿಂದ ಪಾಕಿಸ್ಥಾನವು ಉದಿಸಿತು ಹಟದಿಟಮಾಡುತಲಿ ॥

ಶ್ಲೋಕ

ಕೂಡಿಬಾಳದೆ ಪಾಕಿಸ್ಥಾನವು ಬೇರೆಯಾದರು ಸಹಿಸದೆ
ಹೇಡಿತನದೊಳು ಜಮ್ಮು ಕಾಶ್ಮೀರ್ ನುಂಗಲೋಸುಗ ಕಾದಿದೆ ॥

ದೊಡ್ಡ ಉಡನ್

ಸ್ವತಂತ್ರಭಾರತದಿಂದ ಬ್ರಿಟೀಷರು ಬಿಟ್ಟರು ಬಂಡಿಯ ತೀವ್ರಗತಿ
ಸ್ವತಂತ್ರಭಾರತ ರಾಷ್ಟ್ರಪತೀ ರಾಜೇಂದ್ರ ಪ್ರಸಾದರ ತ್ಯಾಗವತಿ
ಸ್ವತಂತ್ರಭಾರತ ಪ್ರಧಾನಸಚಿವರ ನೆಹರು ಮತೀಜನ ಪ್ರೇಮವತಿ
ಸ್ವತಂತ್ರ ಸಾಧನೆಗೈದ ಮಹಾತ್ಮರ ಕೀರ್ತಿನಿರಂತರ ವಿಖ್ಯಾತಿ ॥

ಉತಾರ್ ಉಡನ್

ಸಂಚಿತಹುಡುಕಿತು ಹರಿಜನರುದ್ಧಾರ ಸ್ವತಂತ್ರ ಪಡೆದಾಕ್ಷಣ ಕಾಂಗ್ರೆಸ್
ಮಿಂಚಿದ ಆರ್ನೂರ್ ಸಂಸ್ಥಾನಂಗಳ ವಿಲೀನಗೊಳಿಸಿತು ಘನಕಾಂಗ್ರೆಸ್ ॥
ವಂಚನೆಯಿಲ್ಲದೆ ನೀರಾವರಿ ಮೇಣ್ ದೇಶದ ಏಳಿಗೆಯನು ಕಾಂಗ್ರೆಸ್
ಪಂಚವಾರ್ಷಿಕದ ಯೋಜನೆಯಿಂದಲಿ ಸಾಧಿಸುತಿರುವುದು ನಿಜಕಾಂಗ್ರೆಸ್ ॥

ಉಡನ್

ಇದು ಒಂದು ಕೇಳಿ ಜನರೆಲ್ಲ ಪೂರ್ಣಕಿವಿಕೊಟ್ಟು
ಅಧಿಕಾರದ ಲಾಲಸೆಬಿಟ್ಟುಬಿಡಿರಿ ದಯವಿಟ್ಟು
ಮುದದಿಂದ ರಾಷ್ಟ್ರ ಕರ್ತವ್ಯದೊಳಗೆ ಮನಸಿಟ್ಟು
ಒದಗಿರುವ ಸ್ವತಂತ್ರತೆ ಉಳಿಸಿಕೊಳ್ಳಿ ಶ್ರಮಪಟ್ಟು ॥

ಗುಲ್ಲುಡನ್

ದಿನಕ್ಕೊಂದು ಪಕ್ಷಹುಟ್ಟುತಿಹುದು
ಜನಕ್ಕಿದರಿಂದ ಸೌಖ್ಯಸಿಗದು
ಮನಕ್ಕಿದು ತಾನೆಲೆ ತನ್ನದು
ತಾನೆಚ್ಚೆಂಬುದು ಬಿಟ್ಟರೆ ಸುಖವಿಹುದು ॥

ಶ್ಲೋಕ

ದೇಶದೊಳು ಜನಜಾಗ್ರತೆಯಪಡಲೆಂದು ಲಾವಣಿ ರಚಿಸಿದೆ
ದೇಶಭಕ್ತರು ತಿಳಿಯಲೋಸುಗ ಮುಖ್ಯ ವಿಷಯವು ತಿಳಿಸಿದೆ ॥

ಚಾಲು

ಸ್ಮರಿಸಿ ಪುಟ್ಟ ನಂಜಣ್ಣರ ಪೇಳಿದ ನೀಲಕಂಠಯ್ಯನು ಪದವಿದನು
ಭಾರತೀಯ ಸ್ವಾತಂತ್ರ್ಯದ ಸಮರದ ಸಾರವನರಿಯಿರಿ ಸೂರಿ ಜನ.

ತುರಾಬಿರುದಾರ್, ಲಾವಣಿ ವಿದ್ವಾನ್ ಬಿ. ನೀಲಕಂಠಯ್ಯ ಮೈಸೂರು ಸಂಸ್ಥಾನದ ಅಪರೂಪದ ಲಾವಣಿ ಕಲಾವಿದರು. ಪ್ರಥಮ ದರ್ಜೆಯ ಗುರುಮುಖೇನ ಲಾವಣಿ ದೀಕ್ಷೆಪಡೆದವರು. ಲಾವಣಿ ಗಾಯನ, ರಚನೆಯಲ್ಲಿ ಸಿದ್ಧಹಸ್ತರು. ಯಾವುದೇ ವಿಷಯದ ಬಗೆಗಾದರೂ ಮಾಹಿತಿ ಸಂಗ್ರಹಿಸಿ, ಅಚ್ಚುಕಟ್ಟಾಗಿ ಲಾವಣಿ ರಚಿಸುವ ಕಲೆ ಅವರಿಗೆ ಸಿದ್ಧಿಸಿತ್ತು. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅವರ ಲಾವಣಿಗಳು ಬೀರಿದ ಪ್ರಭಾವ ಅಷ್ಟಿಷ್ಟಲ್ಲ. ಅವರ ಟಿಪ್ಪುಸುಲ್ತಾನ್ ಲಾವಣಿ ಬ್ರಿಟಿಷರಿಂದ ನಿಷೇಧಕ್ಕೆ ಒಳಗಾಗಿತ್ತು. ಬೆಂಗಳೂರು ಗಣಪತಿ ಸತ್ಯಾಗ್ರಹ ಲಾವಣಿ ನವಜಾಗೃತಿಗೆ ನಾಂದಿಯಾಯಿತು. ೧೯೩೮ರಲ್ಲಿ ನಡೆದ ಶಿವಪುರ ರಾಷ್ಟ್ರಕೂಟ, ವಿದುರಾಶ್ವತ್ಥ ಹತ್ಯಾಕಾಂಡ ಲಾವಣಿ ಇತಿಹಾಸದಲ್ಲಿ ಮರೆಯದ ಅಧ್ಯಾಯಗಳ ದಾಖಲೆ. ಭಾರತ ಸ್ವಾತಂತ್ರ್ಯ ಚಳವಳಿಯ ಲಾವಣಿ ಭಾರತ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯ ಮಹಾಗಾಥೆ. ಇವುಗಳಲ್ಲದೆ ಇಪ್ಪತ್ತೈದಕ್ಕೂ ಹೆಚ್ಚು ವೈವಿಧ್ಯಮಯವಾದ ಲಾವಣಿಗಳನ್ನು ನೀಲಕಂಠಯ್ಯ ರಚಿಸಿದ್ದಾರೆ.

ಮೈಸೂರು ಸಂಸ್ಥಾನದಲ್ಲಿ ವ್ಯಾಪಕವಾಗಿ ಪ್ರಚಾರದಲ್ಲಿದ್ದ, ಈಗಲೂ ಅಲ್ಲಲ್ಲಿ ಆಗಾಗ ಕಾಣಿಸುವ ಅನುಪಮ ಲಾವಣಿ ಗಾಯನದ ಮಾದರಿಗಳಿಗೆ ಪ್ರಸ್ತುತ ಲಾವಣಿಗಳು ಸಾಕ್ಷಿಯಾಗಿವೆ.

**ಪ್ರೊ. ಡಿ. ಲಿಂಗಯ್ಯ**

**ಕರ್ನಾಟಕ ಜಾನಪದ ಪರಿಷತ್ತು**
ಬೆಂಗಳೂರು